
# ಅಂತರತಮ ಗುರು



ನಮ್ಮ ಅಂತರಂಗದಲ್ಲೊಬ್ಬ ಹಿತೈಷಿಯಿದ್ದಾನೆ. ಅವನು ನಮ್ಮನ್ನು ಸದಾ ಸನ್ಮಾರ್ಗದಲ್ಲಿ ನಡೆಯುವಂತೆ ಹೇಳುತ್ತಾನೆ. ನಾವು ಅಕಸ್ಮಾತ್ ತಪ್ಪು ಹೆಜ್ಜೆ ಇಟ್ಟರೆ ಎಚ್ಚರಿಸುತ್ತಾನೆ; ಜನಪರ-ಜೀವಪರ ಸೆಲೆಗಳನ್ನು ನಮ್ಮಲ್ಲಿ ಚಿಮ್ಮಿಸಿ ಮಾನವೀಯಗೊಳಿಸುತ್ತಾನೆ. ಆ ಹಿತೈಷಿಯನ್ನು ನಾವು 'ಪ್ರಜ್ಞೆ' ಎಂದು ಗುರುತಿಸಬೇಕು. ಅಧ್ಯಾತ್ಮ ಮನೋಧರ್ಮದವರು ಅವನನ್ನು 'ಆತ್ಮ' ಎಂದು ಗುರುತಿಸುತ್ತಾರೆ. ಮತ್ತೆ ಕೆಲವರು 'ಅಂತಃಸಾಕ್ಷಿ' ಎಂದೂ ಕರೆಯುತ್ತಾರೆ.

ನಮ್ಮೊಳಗಿನ ಈ ಪ್ರಜ್ಞೆ ವ್ಯಕ್ತಿಯನ್ನು ಮಾನವೀಯ ಸಂಬಂಧಗಳ ಬೆಸುಗೆಯನ್ನು ಭದ್ರಗೊಳಿಸಲು ಪ್ರೇರೇಪಿಸುತ್ತದೆ. ಜಾತಿ ಮತ ಬಣ್ಣ ವರ್ಗ ಮೊದಲಾದ ಜೀವ ವಿರೋಧಿ ಉಪಾಧಿಗಳಿಂದ ಮುಕ್ತಗೊಳಿಸಿ ನಮ್ಮನ್ನು ಕೇವಲ ಮನುಷ್ಯರನ್ನಾಗಿಸಲು ಹೋರಾಡುತ್ತದೆ. ಧರೆಯ ಮೇಲಣ ಮನುಷ್ಯ ಕೇವಲ ಮನುಷ್ಯನಾಗಿ ರೂಪ ಧರಿಸಬೇಕೇ ಹೊರತು, ಮಾನವೀಯ ಸ್ಪಂದನಗಳಿಗೆ ಮಾತ್ರ ಪ್ರತಿಕ್ರಿಯೆ ತೋರಬೇಕೇ ಹೊರತು ಕಟ್ಟಿಕೊಂಡ ತೊಟ್ಟಿಕೊಂಡ ಕೃತಕ ಉಪಾಧಿಗಳಿಗಲ್ಲ. ಆದರೆ ಅಂತರಾಳದ ದಾರಿದೀಪವಾದ ಪ್ರಜ್ಞೆಯ ಮಾತನ್ನು ಲೆಕ್ಕಿಸದೆ ಮನುಷ್ಯ ಅನೇಕ ಮಾನವ ವಿರೋಧಿ ಕ್ರಿಯೆಗಳಲ್ಲಿ ತೊಡಗುತ್ತಾನೆ. ಇದಕ್ಕೆ ಅವನಲ್ಲಿ ನಿಧಾನವಾಗಿ ಬೆಳೆದುಕೊಳ್ಳುವ ಸ್ವಾರ್ಥವೇ ಕಾರಣ.

ಸ್ವಾರ್ಥವೆಂದರೆ ಏನು? ತಾನು, ತನ್ನದು, ತನ್ನವರದು ಎಂಬ ವ್ಯಕ್ತಿನಿಷ್ಠ ಆಲೋಚನೆಗಳು ಮತ್ತು ಆ ನೆಲೆಯಿಂದ ನಡೆಸುವ ಕ್ರಿಯೆಗಳು ತಂದುಕೊಡುವ ಸುಖ ಸಾಧನಗಳು; ಸಮುದಾಯ, ಸಹಜೀವಿಗಳನ್ನು ತುಳಿದು ತಾನು ಮಾತ್ರ ಬದುಕಬೇಕೆಂಬ ಜೀವನ ವಿಧಾನ. ಈ ಕ್ರಿಯೆಯ ಆಚಾರವನ್ನು ನಡೆಸುವುದು, ಈ ಸ್ವಾರ್ಥತೆಯನ್ನು ನಿಯಂತ್ರಿಸಿ ಮುನ್ನಡೆಸುವುದು 'ಬುದ್ಧಿ'. ಈ 'ಬುದ್ಧಿ' ವ್ಯಕ್ತಿಯ ಹುಟ್ಟಿನಿಂದ ಬಂದಿರುವಂಥದ್ದಲ್ಲ; ಅನಂತರ ಅವನು ತನ್ನ ಓದು, ಲೋಕಾನುಭವ ಮತ್ತು ತನ್ನ ಆವರಣದ ಪ್ರಭಾವಗಳಿಂದ ಗಳಿಸಿಕೊಂಡಿರುವಂಥದ್ದು. ಈ 'ಬುದ್ಧಿ'ಯನ್ನು ತನ್ನಿಷ್ಟಕ್ಕೆ ತನ್ನಂತೆ ವ್ಯವಹರಿಸಲು ಬಿಡಬಾರದು. ಅದು ಸದಾ 'ಆತ್ಮ'ದ ಅಣತಿಯ ಮೇಲೆ ನಡೆಯುವಂತಿರಬೇಕು. ಅದು ಯಜಮಾನನಾಗದಂತೆ ಎಚ್ಚರಿಕೆ ವಹಿಸಬೇಕು. ಅದು ಆತ್ಮದ ನಿಯಂತ್ರಣದಲ್ಲಿದ್ದಾಗ ಮಾತ್ರ ಬದುಕು ಜನಪರವಾಗಿ ಅರಳಲು ಸಾಧ್ಯವಾಗುತ್ತದೆ; ನಾಗರೀಕತೆ ಸಂಸ್ಕೃತಿಗಳು ಒಂದಕ್ಕೊಂದು ಪೂರಕವಾಗಿ ವಿಕಾಸಗೊಳ್ಳುತ್ತವೆ.

ಈ 'ಬುದ್ಧಿ'ಯನ್ನು 'ಭಾವ'ಗೊಳಿಸುವ ಕ್ರಿಯೆ ಅತ್ಯಂತ ಕಠಿಣವಾದುದು. ಬುದ್ಧಿಯನ್ನು ಪಳಗಿಸಿ ನಿಯಂತ್ರಿಸುವ ಮುನ್ನ ನಮ್ಮ ಪ್ರಜ್ಞೆ ಧೀಮಂತವಾಗಬೇಕು; ಅಚಲತೆಯನ್ನ ನೀಗಿಕೊಳ್ಳಬೇಕು. ಅದು ತನ್ನಲ್ಲಿರುವ ಸಹಜ ಶಕ್ತಿಯನ್ನು ಗುರುತಿಸಿಕೊಳ್ಳಬೇಕು. ಗುರುತಿಸಿಕೊಳ್ಳುವ ಮೂಲಕ ತಾನು ಬುದ್ಧಿಗಿಂತ ಅಧಿಕತಮನೆಂದು ಸ್ಥಾನ ನಿರ್ದೇಶನ ಮಾಡಿಕೊಳ್ಳಬೇಕು. ಈ ಕ್ರಿಯೆ ಅಹಂಕಾರ ಪೂರಿತವಾದುದಲ್ಲ. ಅಹಂಕಾರ ನಿರಸನದಿಂದ ಒಬರುವ ಸಾತ್ವಿಕ ಶಕ್ತಿ. ಈ ಪ್ರಜ್ಞೆಯೇ ನಮಗೆ ದಾರಿ ತೋರುವ ಗುರುವಾಗುತ್ತದೆ. ಇದನ್ನೇ ಕವಿ ಕುವೆಂಪು 'ಅಂತರ ತಮ ಗುರು'ವೆಂದು ಕರೆಯುತ್ತಾರೆ. ಈ ಗುರು 'ಆತ್ಮತಮೋಹಾರಿ.' ನಮ್ಮ ಸಂಪ್ರದಾಯ, ಮತ ಬಣ್ಣ ಜಾತಿ ವರ್ಗಗಳು ನಮ್ಮ ಆತ್ಮವನ್ನು ಅಂಧಗೊಳಿಸಿರುತ್ತವೆ. ಅಲ್ಲಿ ಕತ್ತಲು ಕವಿದಿರುತ್ತದೆ. ಅದನ್ನು ನಿವಾರಿಸುವ ಶಕ್ತಿ ಇರುವುದು ಈ ಅರಿವೆಂಬ ಗುರುವಿಗೆ ಮಾತ್ರ. ನಮ್ಮ ಬುದ್ಧಿ ಮನಸ್ಸುಗಳು 'ಜಟಿಲ ಕುಟಿಲತಮ... ಪಾಪ ಪುಣ್ಯ ಲಲಿತ ರುದ್ರ ಲೀಲಾ ರೂಪ ಅರೂಪ'ಗಳಲ್ಲಿ ವಿಹರಿಸುತ್ತಿರುತ್ತವೆ. ಅವುಗಳನ್ನು ಸರಿದಾರಿಗೆ ತರುವ ಆತ್ಮಕ್ಕೆ ಬಲವಿರುವುದು ಮುಖ್ಯ. ಅದು ಆತ್ಮಶಕ್ತಿಯಾಗಿ ರೂಪುಗೊಂಡಾಗ ಗುರುವಾಗುತ್ತದೆ. ಇಂಗ್ಲಿಷ್‌ನಲ್ಲಿ 'ವಿಲ್‌ಪವರ್' ಎಂದು ಸಾಮಾನ್ಯವಾಗಿ ಗುರುತಿಸಲಾಗುತ್ತದೆ. ಈ ಶಕ್ತಿಯಿಂದಾಗಿಯೇ ಪ್ರಾಪಂಚಿಕವಾಗಿ ಸವಾಲುಗಳನ್ನು ಸ್ವೀಕರಿಸಿ ಹೋರಾಡುವ ಮನೋಧರ್ಮ ಪ್ರಾಪ್ತಿಯಾಗುತ್ತದೆ.

ಈ 'ಅಂತರ ತಮ ಗುರು'ವನ್ನು ಅಧ್ಯಾತ್ಮಿಕ ನೆಲೆಯಿಂದ ಮಾತ್ರ ಹುಡುಕ ಹೋಗಬಾರದು. ಲೌಕಿಕ ನೆಲೆಯಲ್ಲೂ ಅವನು ಇದ್ದೆ ಇರುತ್ತಾನೆ. ಇಹವಿಲ್ಲದೆ ಪರವಿಲ್ಲವೆಂಬ ಮಾತನ್ನು ನಾವು ಸದಾ ನೆನಪಿನಲ್ಲಿಡಬೇಕು.

■ ಶಿಕಾಕು

## ಮಾತೇ ಮುತ್ತು

'ಇವನು ಮಾಡಲಾರ'– ಎಂದದ್ದನ್ನು ಯಾರು ಮಾಡುತ್ತಾರೋ, ಅವರೇ ಪ್ರತಿಭಾಶಾಲಿಗಳು.
–ಇ.ವಿ.ಲೂಕಾಸ್

ಆಗಾಗ ಸಣ್ಣ 'ಪ್ರತಿಭಟನೆ'ಗಳಿರುವುದು ಒಳ್ಳೆಯದೇ– ಪ್ರಪಂಚದಲ್ಲಿ ಆಗಾಗ ಬಿರುಗಾಳಿಗಳಿರುವಂತೆ.
–ಥಾಮಸ್ ಜೆಫರ್‌ಸನ್

ನೀನು ಪಾಪಿ ಅಂದರೆ ಏನಾತು? ಈ ಕ್ಷಣವೇ ನೀನು ಸಂತನಾಗಬಲ್ಲೆಯೋ! ಪಾಪಿ ಆಗಲಿಕ್ಕೆ 60 ವರ್ಷ ತಗೊಂಡಿರಬಹುದು. ಸಂತನಾಗಲಿಕ್ಕೆ 60 ನಿಮಿಷ ಸಾಕು. ಒಳ್ಳೆಯವನಾಗಬೇಕಂದ್ರ ಮನಸ್ಸು ಬೇಕು.
–ಸಿದ್ದೇಶ್ವರ ಸ್ವಾಮಿಗಳು

ನಟನೇ ಸರ್ವಶ್ರೇಷ್ಠ, ನಿರ್ದೇಶಕ ಗೊಂಬೆ ಆಡಿಸುವ ಸೂತ್ರಧಾರ ಇದ್ದಂತೆ. ಆದರೆ ನಟ ಗೊಂಬೆ ಅಲ್ಲ.
–ಎಚ್.ಎನ್.ಹೂಗಾರ

ಪ್ರಯಾಣ ಮಾಡದವನಿಗೆ ಮನುಷ್ಯರ ಗುಣ, ಅವಗುಣ ಗೊತ್ತಾಗುವುದಿಲ್ಲ.
–ಆಫ್ರಿಕಾ ಗಾದೆ

ಪ್ರಯೋಗಕ್ಕೆ ಅರ್ಹವಾಗಿದ್ದರೆ ಮಾತ್ರ ಅದು ಉತ್ತಮ ನಾಟಕ ಕೃತಿ.
–ಕಾಳಿದಾಸ

ಪ್ರಾರ್ಥನೆ ಮುಗಿಸಿ ಏಳುವಾಗ ಯಾರು ಉತ್ತಮರಾಗಿರುತ್ತಾರೋ ಅವರ ಪ್ರಾರ್ಥನೆ ಫಲಿಸಿದಂತೆಯೇ.
–ಜಾರ್ಜ್ ಮೆರಿಡಿತ್

ಮನುಷ್ಯ ಬದುಕುವುದು ಕೇವಲ ಹಣದಿಂದಲ್ಲ, ಬಡತನದ ಸರಳತೆಯಿಂದ ಅಲ್ಲ, ಅಧಿಕಾರದಿಂದ ಅಲ್ಲ, ಐಶ್ವರ್ಯದಿಂದ ಅಲ್ಲ, ಅವನ ಜೀವನ ಉಳಿಯುವುದು ಹಾಗೂ ಅವನ ಸೃಷ್ಟಿಗೆ ಅರ್ಥ ಬರುವುದು ಹಲವು ಬಗೆಯ ಕಾಳಜಿಯಿಂದ, ಅವುಗಳಲ್ಲಿ ಒಂದು– ಪ್ರೀತಿ.
–ಪಿ.ಲಂಕೇಶ್

'ನಮ್ಮನ್ನು ಪ್ರೀತಿಸುವವರಿದ್ದಾರೆ' ಎನ್ನುವ ನಂಬಿಕೆಯೇ ಜೀವನದ ಅತ್ಯಂತ ಹೆಚ್ಚಿನ ಸುಖ.
–ವಿಕ್ಟರ್ ಹ್ಯೂಗೋ

ನಮಗೆ ಬೇಕಾದದ್ದು ಸಿಕ್ಕದಿದ್ದರೆ, ಸಿಕ್ಕಿದ್ದನ್ನು ಪ್ರೀತಿಸಬೇಕು.
–ಫ್ರೆಂಚ್ ಗಾದೆ

ತನ್ನ ಮಕ್ಕಳಿಗೆ ಏನನ್ನಾದರೂ ಬಿಟ್ಟು ಹೋಗುವದಿದ್ದರೆ ಬ್ಯಾಂಕಿನ ಠೇವಣಿಯನ್ನಲ್ಲ, ಒಳ್ಳೆಯ ಪುಸ್ತಕಗಳಿಂದ ತುಂಬಿದ ಗೃಹ ಗ್ರಂಥಾಲಯವನ್ನು ಬಿಟ್ಟು ಹೋಗಬೇಕು. ಅದರಲ್ಲಿ ಮನುಷ್ಯನಿಗೆ ಬೇಕಾದುದೆಲ್ಲ ಇರುತ್ತದೆ.
–ಪಾಟೀಲ ಪುಟ್ಟಪ್ಪ

ಒಂದು ಪುಸ್ತಕ ಮೊದಲು ಓದುಗನನ್ನು ತನ್ನೆಡೆಗೆ ಸೆಳೆದುಕೊಳ್ಳಬೇಕು; ಆಮೇಲೆ ಅವನ ಕೈಗೆ ಹೋಗಬೇಕು; ಅವನನ್ನು ಓದುವಂತೆ ಮಾಡಬೇಕು. ಓದಿದ್ದು ಏನು ಎನ್ನುವುದು ಆಮೇಲಿನ ಮಾತು.
–ಹಾ.ಮಾ.ನಾಯಕ